**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 174/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ** 08-09-2025 **ಪಿ ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಂ ಆರ್ ವಕೀಲರಿಂದಃ

ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ ಪ್ರತಿವಾದಿಯರು ಸಲ್ಲಿಸಿದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ದಾವಾ ಆಸ್ತಿಯಲ್ಲಿ ಪೈಪ್ ಲೈನ್ ಗಳು ಇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿರುವ ಪೈಪ್ ಲೈನಗಳು ಹೊಳೆಯಿಂದ ನಮ್ಮ ಜಮೀನಿನಲ್ಲಿ ಹಾದು ಹೋಗಿವೆ. ಸದರಿ ಪೈಪ್ ಲೈಗಳಿಗೆ ಕೂಡಿಸಿದ ಮೋಟಾರ್ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಪೈಪ್ ಲೈನುಗಳನ್ನು ನಾನು ಚಿಕ್ಕವನಿದ್ದಾಗಿನಿಂದಲೂ ನೋಡುತ್ತಿದ್ದೇನೆ. ಸದರಿ ಪೈಪ್ ಲೈನುಗಳು ಪ್ರತಿವಾದಿಯರ ಜಮೀನಿಗೆ ನೀರು ಉಣಿಸಿ ದಾವಾ ಆಸ್ತಿಗೆ ನೀರು ಉಣಿಸುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮಳೆ ಆಶ್ರಿತ ಜಮೀನು. ದಾವಾ ಆಸ್ತಿಯಲ್ಲಿ ಮಳೆಗಾಲದಲ್ಲಿ ಭತ್ತ ಬೆಳೆಯುತ್ತೇವೆ. ದಾವಾ ಆಸ್ತಿಗೆ ನೀರಿನ ಮೂಲ ಯಾವುದು ಎಂದರೆ ಸಾಕ್ಷಿಯು ಮಳೆ ನೀರನ್ನು ಉಪಯೋಗಿಸುತ್ತೇವೆ ಮಳೆ ಇಲ್ಲದೇ ಇದ್ದಾಗ ಪಕ್ಕದ ಜಮೀನಿನಿಂದ ನೀರನ್ನು ಪಡೆಯುತ್ತೇವೆ. ಪಕ್ಕದ ಜಮೀನಿನವರು ಎಂದರೆ ನನ್ನ ಅಣ್ಣ ಹನುಮಂತಪ್ಪ. ಸದರಿಯವರು ಪೈಪ್ ಲೈನನ್ನು ಹೊಂದಿದ ಬಗ್ಗೆ ದಾಖಲೆಯನ್ನು ಸಲ್ಲಿಸಿಲ್ಲ. ಈ ರೀತಿ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 06.07.2023 ರಂದು 2 ನೇ ಪ್ರತಿವಾದಿ ತಹಶೀಲ್ದಾರರವರಿಗೆ ದಾವಾ ಆಸ್ತಿಗೆ ಸಂಬಂದಿಸಿದಂತೆ ಖಾತಾ ಬದಲಾವಣೆ ಮಾಡಬಾರದು ಎಂದು ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ. ನಿಪಿ.1 ಪಾಲು ವಿಭಾಗ ಪತ್ರದಲ್ಲಿ ನಿಪಿ.1 (ಎ) ಗುಡ್ಡಪ್ಪನವರ ಸೈಟು. ಸದರಿ ಗುಡ್ಡಪ್ಪನ ತಂದೆ ಹೆಸರು ಕೆಂಚಪ್ಪ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿರುವ ಸಹಿ ಮತ್ತು ನಿಪಿ.1(ಎ) ಸಹಿ ಎರಡು ಒಂದೇ ಎಂದರೆ ಸಾಕ್ಷಿಯು ಗುಡ್ಡಪ್ಪನವರು ನಿಪಿ.1 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಎಂ ಭೀಮಪ್ಪ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಹನುಮಂತಪ್ಪ, ನಾಗರಾಜ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರು ದಿಃ 28.04.2015 ರಂದು ದಾವಾ ಆಸ್ತಿಯ ಪ್ರಯುಕ್ತ ಕ್ರಯದ ಕರಾರು ಪತ್ರವನ್ನು 2 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾಗಪ್ಪ ಎಂದರೆ ನಾನೇ. ನಾನು ಅಕ್ಕಮ್ಮ, ಗುಡ್ಡಪ್ಪ, ಭೀಮಪ್ಪ ಮತ್ತು ನಾಗಪ್ಪ ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ಮಾರಾಟ ಮಾಡುತ್ತೇವೆ ಎಂದು ಒಪ್ಪಿಗೆ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 24.09.2009 ರಂದು, ಗುಡ್ಡಪ್ಪ, ಹೆಗ್ಗಪ್ಪ, ಹನುಮಂತಪ್ಪ ಮತ್ತು ನಾಗಪ್ಪ ರವರು ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ

3,50,000/- ರೂಗಳಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರಗಳು ಆಗುವ ಪೂರ್ವದಲ್ಲಿ ದಾವಾ ಆಸ್ತಿ ಗುಡ್ಡಪ್ಪನ ಹೆಸರಿಗೆ ಇತ್ತು. ನಿಪಿ.1 ರಲ್ಲಿ ಸದರಿ ಗುಡ್ಡಪ್ಪ ಮೊದಲನೇ ಪಕ್ಷಗಾರ ಎಂದರೆ ಸರಿ. ಗುಡ್ಡಪ್ಪ ಮಡಿವಾಳರ ಮನೆತನಕ್ಕೆ ಯಜಮಾನನಾಗಿ ಕಾರ್ಯನಿರ್ವಹಿಸುತ್ತಿದ್ದ ಎಂದರೆ ಸರಿ. ಸದರಿ ಗುಡ್ಡಪ್ಪ ತನ್ನ ಹೆಸರಿನ ಖಾತೆಯಲ್ಲಿ ಇದ್ದ ಆಸ್ತಿಗಳ ವಿಚಾರವಾಗಿ ಯಾವ ಯಾವ ವ್ಯವಹಾರಗಳನ್ನು ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಗುಡ್ಡಪ್ಪನವರ ಕಾಲದಿಂದ ನಮ್ಮ ಕಾಲದವರೆಗೂ ದಾವಾ ಆಸ್ತಿಯ ವಿಚಾರವಾಗಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡು ಸ್ವಾದೀನತೆಯನ್ನು 2 ನೇ ಪ್ರತಿವಾದಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ